ಆ) ಈ ಫಾರಂ ಹೌಸಿನ ಹತ್ತಿರ ಇರುವ ಮಲಪ್ರಭಾ ಜಲಾಶಯದ ನೀರನ್ನು ಪಂಪ್‌ಸೆಟ್ ಮೂಲಕ ರೇಷ್ಮೆ ಕೃಷಿಗೆ ಒದಗಿಸಲು ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಬಹುದಲ್ಲವೇ?

ಶ್ರೀ ಚನ್ನಿಗಪ್ಪ (ರೇಷ್ಮೆ ಸಚಿವರು) :

ಅ) ಇಲ್ಲ.

ಆ) ಈ ಕ್ಷೇತ್ರದ ಮಣ್ಣು ಹಿಪ್ಪುನೇರಳೆ ವ್ಯವಸಾಯಕ್ಕೆ ಸೂಕ್ತವಿಲ್ಲ. ಈ ಮಣ್ಣಿನಲ್ಲಿ ಬೆಳೆದ ಬಿತ್ತನೆ ಗೂಡು ನೂಲು ಬಿಚ್ಚಾಣಿಕೆಗೆ ಮಾತ್ರ ಯೋಗ್ಯವಿರುತ್ತದೆ. ಆದ್ದರಿಂದ ಕ್ಷೇತ್ರವನ್ನು ಬಿತ್ತನೇ ಕ್ಷೇತ್ರವಾಗಿ ಅಭಿವೃದ್ಧಿಪಡಿಸಿದಲ್ಲಿ ಸರ್ಕಾರಕ್ಕೆ ನಷ್ಟವುಂಟಾಗುವುದರಿಂದ ಸೂಚಿತ ಕ್ರಮ ಸಾಧುವಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

445(721)ಶ್ರೀ ಜೆ. ನರಸಿಂಹಸ್ವಾಮಿ(ದೊಡ್ಡಬಳ್ಳಾಪುರ) ಮಾನ್ಯ ಭಾರಿ ಮಾಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಅಭಿವೃದ್ಧಿ ಸಚಿವರು.

ಅ) ಸಣ್ಣ ಕೈಗಾರಿಕೆಗಳಿಗೆ ಸಹಾಯಧನ ನೀಡುವುದಾಗಿ ಸಚಿವರು ನೀಡಿದ್ದ ಭರವಸೆ ಬಗ್ಗೆ ಸರ್ಕಾರದಿಂದ ಯಾವ ಕ್ರಮ ತೆಗೆದುಕೊಳ್ಳಲಾಗಿದೆ;

ಆ) ಪ್ರಸಕ್ತ ಸಾಲಿನಲ್ಲಿ ರಾಜ್ಯ ಸಹಾಯಧನ ಮಂಜೂರಾದ 6562 ಘಟಕಗಳಿಗೆ ಶೇ:50 ರಂತೆ ರೂ. 77.59 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಬಾಕಿ ಉಳಿದ ಸಹಾಯಧನವನ್ನು 2004–05 ಹಾಗೂ 2005–06ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗುವುದು.

446(724)ಶ್ರೀ. ನರಸಿಂಹಸ್ವಾಮಿ. ಜಿ(ದೊಡ್ಡ ಬಳಾಪುರ) ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸಮಾಜ ಕಲ್ಯಾಣ ಇಲಾಖಾ ವತಿಯಿಂದ ನಡೆಯುವ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳಿಗೆ ಒಂದು ದಿನಕ್ಕೆ ತಗಲುವ ವೆಚ್ಚ ವೆಷ್ಟು;

ಡಾ॥ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಸಮಾಜ ಕಲ್ಯಾಣ ಇಲಾಖೆಯು ಮೇಟ್ರಿಕ್ ಪೂರ್ವ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗೆ ಪ್ರತಿ ದಿನ ರೂ. 13.33 ಗಳ ಹಾಗೂ ಮೆಟ್ರಿಕ್ ನಂತರದ ಪ್ರತಿ ವಿದ್ಯಾರ್ಥಿಗೆ ರೂ. 15.00 ರಂತೆ ವೆಚ್ಚ ಮಾಡುತ್ತಿದೆ.

447(725) ನರಸಿಂಹಸ್ವಾಮಿ. ಜೆ(ದೊಡ್ಡಬಳ್ಳಾಪುರ) ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ನಿಗಮದ ವತಿಯಿಂದ ಪ್ರತಿ ತಾಲ್ಲೂಕಿಗೆ ಎಷ್ಟು ಜನ ಫಲಾನುವಿಗಳನ್ನು ಆಯ್ಕೆ ಮಾಡಬೇಕೆಂದು ನಿಗದಿಪದಿಸಿದೆ;

ಆ) ಪ್ರತಿ ಫಲಾನುಭವಿಗೆ ಎ ್ಟ ಸಹಾಯ ಧನವನ್ನು ನೀಡಲಾಗುತ್ತಿದೆ?